Succession Certificate ಇಲ್ಲದೆ, ಯಾರೋ ಹಣ ಕ್ಲೇಮ್ ಮಾಡಿದರೆ, ಕೊಡುವುದಕ್ಕಾಗುವುದಿಲ್ಲ.

Supply of Electricity for I.P. Sets in Chamarajanagar Taluk.

Q.—2469. **Sri U. M. MADAPPA** (Chamarajanagar).—

Will the Government be pleased to state :—

(*a*) the number of estimates prepared for the supply of electricity for I.P. sets in Chamarajanagar taluk ;

(*b*) the number of estimates which are pending in the the M.P.L., Mysore ;

(*c*) since how long they are pending ;

(*d*) the action taken for their speedy disposal ?

A.—**Sri H. M. CHANNABASAPPA** (Minister for Public Works and Electricity).—

(*a*) Forty-two from 1st April 1957 to 20th February 1958.

(*b*) Five.

(*c*) *Vide* statement appended below.

(*d*) The applicants have been addressed to take night power for which no consent has yet been received. Immediately after the receipt of the applicants' consent the estimates will be sanctioned.

STATEMENT.

Sl. No.	*Name of work*	*How long pending.*
1.	Estimate for power supply to the extent of 3 H.P. for the I.P. set of Rama Naika, Chamarajanagar.	Since 10—2—1958
2.	Estimate for power supply to the extent of 45 H.P. for the I. P. sets of Sri Veerabhadrappa and 8 others.	,, 9—1—1958
3.	Estimate for power supply to the extent of 3 H.P. for an I.P. set of Sri H. M. Chandrappa, Honnur.	,, 14—2—1958
4.	Estimate for power supply to 2 I.P. sets of 5 H.P. each of Sri R. Nagaraja, Yeriyur.	,, 8—2—1958
5.	Estimate for power supply to an I.P. set of 5 H.P, of Sri M. Madappa, Ummathur.	,, 10—8—1957

ಶ್ರೀ ಯು. ಎಂ. ಮಾದಪ್ಪ.—ತಯಾರಾದ 42 ಅಂದಾಜುಗಳ ಪೈಕಿ ಎಷ್ಟು ಅಂದಾಜುಗಳಿಗೆ ಮುಂಜೂರಾತಿಯನ್ನು ಕೊಡಲಾಗಿದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.---37 ಅಂದಾಜುಗಳಿಗೆ ಮುಂಜೂರಾತಿಯನ್ನು ಕೊಡಲಾಗಿದೆ.

ಶ್ರೀ ಯು. ಎಂ. ಮಾದಪ್ಪ.—ಉಳಿದ ಐದು ಅಂದಾಜುಗಳ ಬಗ್ಗೆ ಏನು ತಕ ರಾರು ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಐದು ಅಂದಾಜುಗಳ ಪೈಕಿ ನಂಬಂಧಪಟ್ಟವರಿಗೆ ರಾತ್ರಿವೇಳೆಯಲ್ಲಿ ಪವರ್ ಕೊಡುತ್ತೇವೆಂದು ಹೇಳಿದ್ದೇವೆ. ಅವರು ಹಾಗೆ ರಾತ್ರಿವೇಳೆ ಪವರ್ ತೆಗೆದುಕೊಳ್ಳಲು ಸಿದ್ಧವಾಗಿದ್ದೇವೆಂದು ಇನ್ನೂ ತಿಳಿಸಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಮುಂಜೂರಾತಿಯನ್ನು ಕೊಟ್ಟಿರುವುದರ ಪೈಕಿ ಎಷ್ಟು ಕಡೆ ಕೆಲಸಕ್ಕೆ ಪ್ರಾರಂಭ ಮಾಡಲಾಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಂಜೂರಾಗಿರುವ 37 ಅಂದಾಜುಗಳಲ್ಲಿ ಈಗಾಗಲೇ ಏಳು ಕೇಸುಗಳಲ್ಲಿ ನಾವು ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆ ಮತ್ತು ಐದು ಕೇಸುಗಳಲ್ಲಿ ವರ್ಕ್ ಆರ್ಡರ್ ಕೊಟ್ಟಿದ್ದೇವೆ. ಉಳಿದ 25 ಕೇಸುಗಳಲ್ಲಿ ಪಾರ್ಟಿಗಳು ಸಿದ್ಧವಾಗಿಲ್ಲ.

ಶ್ರೀ ಬಿ. ರಾಚಯ್ಯ.—ಈ 25 ಕೇಸುಗಳಲ್ಲಿ ಪವರ್ ತೆಗೆದುಕೊಳ್ಳುವುದಕ್ಕೆ ಪಾರ್ಟಿಗಳು ಸಿದ್ಧವಾಗಿದ್ದರೂ ಕೂಡ ಇನ್ನೂ ಪವರ್ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾರ್ಟಿಗಳು ಇನ್ನೂ ಸಿದ್ಧವಾಗಿಲ್ಲವೆಂದು ನನಗೆ ಮಾಹಿತಿ ಬಂದಿದೆ.

ಶ್ರೀ ಬಿ. ರಾಚಯ್ಯ.—ಮೈಸೂರಿನಲ್ಲಿರುವ ಲೈಟ್ ಆಫೀಸಿನಲ್ಲಿ ಬಹಳ ನಿಧಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ. ನನಗೆ ಬಂದಿರುವ ತಕ್ಕ ವಿವರಣೆಯ ಪ್ರಕಾರ 25 ಕೇಸುಗಳಲ್ಲಿ ಪಾರ್ಟಿಗಳು ಸಿದ್ಧರಾಗಿಲ್ಲ. ಒಂದುವೇಳೆ ಪಾರ್ಟಿಗಳು ಸಿದ್ಧರಾಗಿದ್ದು ವಿದ್ಯುಚ್ಛಕ್ತಿ ಸರಬರಾಜು ನಡೆಯದೆ ಇದ್ದಪಕ್ಷದಲ್ಲಿ ಅದನ್ನು ನನ್ನ ಗಮನಕ್ಕೆ ತಂದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ರಾತ್ರಿಯ ವೇಳೆ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಬೇಕೆನ್ನುವ ವಿಷಯದಲ್ಲಿ ಸರ್ಕಾರ ಮತ್ತೆ ಪರ್ಯಾಲೋಚನೆ ಮಾಡಿ ಆ ಪದ್ಧತಿಯನ್ನು ತಪ್ಪಿಸಬಹುದು ಒಳ್ಳೆಯದಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ